ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 5, November-December 2025, Pp. 134-139
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ನೆಲಮಂಗಲ ತಾಲೂಕಿನ ಮಣ್ಣೆಯ ಕಪಿಲೇಶ್ವರ ದೇವಾಲಯ: ಒಂದು ಅವಲೋಕನ

**ಡಾ.ಸುಷ್ಮಾ ಹೆಚ್**

ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಮಹಿಳಾ ಕಾಲೇಜು, ದೊಡ್ಡಬಳ್ಳಾಪುರ

***Abstract:***

*ಮಣ್ಣೆಯು ನೆಲಮಂಗಲ ತಾಲೂಕು ಕೇಂದ್ರದಿಂದ 22 ಕಿ.ಮೀ ದೂರದಲ್ಲಿದೆ. ಗಂಗರ ಮಣ್ಣೆ ಅಥವಾ ಮಂಣೆ, ರಾಷ್ಟ್ರಕೂಟರ ಮಾನ್ಯಖೇಟವು 7ನೇ ಶತಮಾನದಿಂದಲೇ ಪ್ರಸಿದ್ಧವಾಗಿದ್ದ ಸ್ಥಳ. ಇದು ಗಂಗರ ನೆಲೆವೀಡಾಗಿತ್ತು. ಗಂಗರ ಉಪರಾಜಧಾನಿಯೆಂದು ಕರೆಯಲಾಗುತ್ತಿದ್ದರೂ ಇದು ಉಪರಾಜಧಾನಿ ಎಂದು ಗಂಗರ ಶ್ರೀಪುರುಷನಿಂದ ಒಂದನೇ ರಾಚಮಲ್ಲನವರೆಗಿನ ಶಾಸನಗಳಲ್ಲಿ ಉಕ್ತವಾಗದೇ ಇರುವುದರಿಂದ, ಗಂಗರ ಪಾರಂಪರಿಕ ಬಿರುದಾವಳಿಯಲ್ಲಿಯೂ ಇದಕ್ಕೆ ಸ್ಥಾನವಿಲ್ಲದಿರುವುದರಿಂದ ಇದೊಂದು ಪ್ರಮುಖ ಆಡಳಿತ ಕೇಂದ್ರ ಎನ್ನಲು ಅಡ್ಡಿ ಇಲ್ಲ. ಪ್ರಸ್ತುತ ಲೇಖನದಲ್ಲಿ ನೆಲಮಂಗಲ ತಾಲೂಕಿನ ಮಣ್ಣೆಯ ಕಪಿಲೇಶ್ವರ ದೇವಾಲಯ ಕುರಿತು ಚರ್ಚೆ ಮಾಡಲಾಗಿದೆ.*

***Keywords:*** *ಕರ್ನಾಟಕ ಇತಿಹಾಸ, ಗಂಗರು, ರಾಷ್ಟ್ರಕೂಟರು, ಶಾಸನಗಳು, ನೆಲಮಂಗಲ, ಮಣ್ಣೆ, ಕಪಿಲೇಶ್ವರ ದೇವಾಲಯ*

## ಪೀಠಿಕೆ

ಶ್ರೀಪುರುಷ ಕೋವಲಾಲದಿಂದ ಹೊಸಪೇಟೆ ಮಾರ್ಗವಾಗಿ ಮಣ್ಣೆಗೆ ತನ್ನ ಆಡಳಿತ ಕೇಂದ್ರವನ್ನು ವರ್ಗಾಯಿಸಿದನು. ಕ್ರಿ.ಶ.750ರ ತೋಟಗೆರೆ ಶಾಸನದಲ್ಲಿ ಮಹಾರಾಜ ಶ್ರೀಪುರುಷ ಎಂದೇ ಉಲ್ಲೇಖಗೊಂಡಿದ್ದು,[1] ಇವನ ಆಳ್ವಿಕೆಯ ಸಂದರ್ಭದಲ್ಲಿ ಇಲ್ಲಿಗೆ ರಾಜಮನೆತನ ಬಂದು ನೆಲೆಸಿದೆ. ಇದಕ್ಕೂ ಮೊದಲೇ ಗಂಗರಿಗೆ ಸ್ಥಳದ ಪರಿಚಯವಿದ್ದಿರಬೇಕು. ಐ.ಕೆ.ಶರ್ಮಾರವರು ವಾದಿಸುವಂತೆ ಮಣ್ಣೆಯ ಕಪಿಲೇಶ್ವರ ಮತ್ತು ಸೋಮೇಶ್ವರ ದೇವಾಲಯಗಳು ಗಂಗರ ದೇವಾಲಯ ನಿರ್ಮಾಣದ ಪ್ರಾಥಮಿಕ ಹಂತದ ರಚನೆಗಳು. (ಪ್ರಾಥಮಿಕ ಹಂತ ಕ್ರಿ.ಶ.350 ರಿಂದ ಕ್ರಿ.ಶ.650ರ ವರೆಗೆ)[2] ಶ್ರೀಪುರುಷನಿಗಿಂತ ಬಹಳ ಮೊದಲೇ ಕಪಿಲೇಶ್ವರ ದೇವಾಲಯ ನಿರ್ಮಾಣವಾಗಿದ್ದು, ಶ್ರೀಪುರುಷ ಮತ್ತು ಅವನ ನಂತರದ ಕಾಲದಲ್ಲಿ ಕಪಿಲೇಶ್ವರ ದೇವಾಲಯವು ಜೀರ್ಣೋದ್ಧಾರಗೊಂಡಿರಬೇಕೆಂದೂ ಐ.ಕೆ.ಶರ್ಮಾರವರು ಅಭಿಪ್ರಾಯಪಡುತ್ತಾರೆ. ಕಪಿಲೇಶ್ವರ ದೇವಾಲಯದ ಅಧಿಷ್ಠಾನವು ಇಟ್ಟಿಗೆ

[1] ಬಿ.ಎಲ್.ರೈಸ್, (1905), ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ–9, NL-33 AD 750, ಮೈಸೂರು ಸರ್ಕಾರ ಕೇಂದ್ರೀಯ ಮುದ್ರಣಾಲಯ, ಬೆಂಗಳೂರು

[2] Sharma.I.K, (1992). Temples of the Gangas of Karnataka, ASI, Delhi, P.55

***Please cite this article as:*** ಸುಷ್ಮಾ, ಹೆಚ್. (2025). ನೆಲಮಂಗಲ ತಾಲೂಕಿನ ಮಣ್ಣೆಯ ಕಪಿಲೇಶ್ವರ ದೇವಾಲಯ: ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್,* 4(5), 134–139

ಅಧಿಷ್ಠಾನವಾಗಿದ್ದು ಅಧಿಷ್ಠಾನದ ಮೇಲಿನ ಪ್ರತೀಯ ಭಾಗವು ಕಲ್ಲಿನ ರಚನೆಯಾಗಿದೆ. ಇದು ಅಧಿಷ್ಠಾನವನ್ನು ಪೂರ್ಣವಾಗಿ ಕಲ್ಲಿಗೆ ಬದಲಾಯಿಸುವ ಪ್ರಕ್ರಿಯೆಯ ಮೊದಲ ಹಂತವಾಗಿದೆ. ಹೀಗಾಗಿ ಕಪಿಲೇಶ್ವರ ದೇವಾಲಯ ಗಂಗರ ದೇವಾಲಯಗಳ ನಿರ್ಮಾಣದ ಪ್ರಾಥಮಿಕ ಹಂತದ ಕೊನೆಯ ಘಟ್ಟದ್ದಾಗಿದೆ.

ರಾಷ್ಟ್ರಕೂಟ ದೊರೆ ಧೃವ ಮತ್ತು ಅವನ ಮಗ ಮೂರನೇ ಗೋವಿಂದನ ಸಮಯದಲ್ಲಿ ಕೆಲ ಕಾಲ ಇದು ರಾಷ್ಟ್ರಕೂಟರ ಆಡಳಿತ ಕೇಂದ್ರವೂ ಆಗಿತ್ತು. ರಾಷ್ಟ್ರಕೂಟರ ಮಣ್ಣೆ ವ್ಯಾಪಾರ ಕೇಂದ್ರವಾಗಿತ್ತು. ಮಣ್ಣೆಯಲ್ಲಿ ಹೊರಗಿನಿಂದ ಬಂದ ವರ್ತಕರೇ ಮುಖ್ಯವಾಗಿ ನೆಲೆಸಿದ್ದರೆಂದರೆ ತಪ್ಪಾಗಲಾರದು. ಯುವರಾಜ ಮಾರಸಿಂಹನ ಆಳ್ವಿಕೆಗೆ ಸೇರಿದ ತಾಮ್ರಶಾಸನವೊಂದು ಮಣ್ಣೆಯಲ್ಲಿ ದೊರೆತಿದ್ದು ಶಾಸನದ ಮಾಹಿತಿ ಈ ರೀತಿ ಇದೆ. ಮಾನ್ಯಪುರದಲ್ಲಿ ಶ್ರೇಷ್ಠಗಣ ನಿರ್ಮಿಸಿದ್ದ ಆದಿತ್ಯ (ಸೂರ್ಯ) ದೇವಾಲಯಕ್ಕೆ ಪೊನ್ನಿ(ಪೊನ್ನಿಡುಕೆ) ವಿಷಯದ ಮಸಕ್ಕಲ ಎಂಬ ಗ್ರಾಮವನ್ನು ದಾನವಾಗಿ ನೀಡಲಾಗಿದೆ.[3] ಪೊನ್ನಿಡುಕೆಯೇ ಇಂದಿನ ತುಮಕೂರಿನ ಹೊನ್ನುಡುಕೆ ಎನ್ನಲಾಗಿದೆ.

ಕ್ರಿ.ಶ.801ರ ಯುವರಾಜ ಮಾರಸಿಂಹನ ಶಾಸನದಲ್ಲಿ ಮಣ್ಣೆ ವಿಷಯದ ವಾವತ್ತೂರು ಗ್ರಾಮವನ್ನು ಮಾನ್ಯಪುರದಲ್ಲಿ ಕಟ್ಟಿದ ಅಹರ್ಪ್ಪತಿ ದೇಗುಲಕ್ಕೆ ದತ್ತಿ ಬಿಟ್ಟಿದ್ದಾಗಿ ತಿಳಿಸಲಾಗಿದೆ.[4] ಈ ಶಾಸನದ 13, 14, 15ನೇ ಪದ್ಯಗಳು ತಿಳಿಸುವಂತೆ ವಿಷ್ಣುಕುಂಡನಿಯ ಭೂಪತಿ ಮಾಧವ ಭಟಾರನ ಮಗನಾದ ಇಂದ್ರ ಭಟಾರನ ಕಾಲದ ಅದೇ ಪರಂಪರೆಯ ದೊರೆಯಾದ ಶ್ರೀಧರಭೂಪತಿಗೆ ಬಾಲಾದಿತ್ಯ ಎಂಬ ಮಗನು ಹುಟ್ಟಿದಾಗ ಈ ಸೂರ್ಯ ದೇಗುಲವು ರಚಿತವಾಯಿತೆಂದು ವಿಧಿತವಾಗುತ್ತದೆ.[5] ಈ ಹಿನ್ನಲೆಯಲ್ಲಿ ಮಾನ್ಯಪುರದ ವರ್ತಕರು ಸೂರ್ಯದೇಗುಲವನ್ನು ಕಟ್ಟಿಸಿದರೆಂಬುದು, ಬಾಲಾದಿತ್ಯನು ಯುವರಾಜ ಮಾರಸಿಂಹನನ್ನು ದೇಗುಲದಲ್ಲಿ ಪೂಜಾ ಸೇವೆ ಜರುಗುವಂತೆ ಅನುಕೂಲ ಮಾಡಿಕೊಡಲು ಬೇಡಿಕೊಂಡಂತೆ ತಿಳಿದುಬರುತ್ತದೆ. ಈ ಶಾಸನಗಳ ಮಾಹಿತಿಯಿಂದ ಮತ್ತು ಕಪಿಲೇಶ್ವರ ದೇವಾಲಯದ ಉತ್ತರಕ್ಕಿರುವ ಗದ್ದೆಯ ಬಯಲಿನಲ್ಲಿದ್ದ ಐದು ಅಡಿ ಎತ್ತರ ಸೂರ್ಯವಿಗ್ರಹ ಮೂರ್ತಿಯಿಂದ ಮಣ್ಣೆಯಲ್ಲಿ ಸೂರ್ಯ ದೇವಾಲಯವಿತ್ತೆಂಬುದು ಸತ್ಯವೆಂದು ತಿಳಿಯುತ್ತದೆ.

ಈಗಿನ ಕಪಿಲೇಶ್ವರ ದೇವಾಲಯವೇ ಶಾಸನಗಳಲ್ಲಿ ಉಕ್ತವಾಗಿರುವ ಅಹರ್ಪತಿ ದೇವಾಲಯವೆಂದು ಪ್ರೊ.ಕ.ವೆಂ.ರಾಜಗೋಪಾಲರು ವಾದಿಸಿದ್ದಾರೆ.[6] ಕಪಿಲೇಶ್ವರ ದೇವಾಲಯದ ಬಗ್ಗೆ ಯಾವುದೇ ಶಾಸನಗಳಿಲ್ಲದಿರುವುದು, ದ್ವಾರಪಾಲಕರು, ಗರ್ಭಗುಡಿಗೆ ಅಂತರಾಳವಿಲ್ಲದಿರುವುದೂ, ಜಾಲಾಂದ್ರದಲ್ಲಿನ ಮಿಥುನ ಶಿಲ್ಪಗಳನ್ನು ಆಧಾರವಾಗಿಟ್ಟುಕೊಂಡು ರಾಜಗೋಪಾಲರವರು ಈ ವಾದವನ್ನು ಮಂಡಿಸುತ್ತಾರೆ. ಆದರೆ ಡಾ.ಹೆಚ್.ಎಸ್.ಗೋಪಾಲ್‌ರಾವ್‌ರವರು ಐದು ಅಡಿ ಎತ್ತರದ ಸೂರ್ಯನ ವಿಗ್ರಹವನ್ನು ಇಡುವಷ್ಟು ಕಪಿಲೇಶ್ವರ ದೇವಾಲಯದ ಗರ್ಭಗುಡಿ ದೊಡ್ಡದಾಗಿಲ್ಲವೆಂದು ಕ.ವೆಂ.ರಾಜಗೋಪಾಲ್‌ರವರ ವಾದವನ್ನು ಅಲ್ಲಗೆಳೆಯುತ್ತಾರೆ. ಡಾ.ವಿ.ಅನುರಾಧರವರೂ ಸಹ ಜಾಲಾಂಧ್ರದ ಮಿಥುನ ಶಿಲ್ಪಗಳನ್ನು ಆಧಾರವಾಗಿಟ್ಟುಕೊಂಡು ಇದು ಸೂರ್ಯ ದೇವಾಲಯ ಎಂಬ ವಾದವನ್ನು ಒಪ್ಪುವುದಿಲ್ಲ.

[3] Rao.M.S.N and Ramesh K.V (Ed.). (1985). Copper Plate Inscription from Karnataka Recent Discoveries, Arechology and Museum, Mysore. P.29

[4] ಮಣ್ಣೆಯ ಅಹರ್ಪತಿ ಮಂದಿರ. (2001). *ಇತಿಹಾಸ ದರ್ಶನ, ಸಂಪುಟ–16,* ಪು.113–116

[5] ಮೇಲಿನದೇ, ಪು.113–116

[6] ಅಡಿಟಿಪ್ಪಣಿ–5, ಪು.113–116

ಕರ್ನಾಟಕದಲ್ಲಿ 2 ರಿಂದ 4ನೇ ಶತಮಾನಗಳವರೆಗೂ ಮರ ಮತ್ತು ಇಟ್ಟಿಗೆಗಳನ್ನು ನಿರ್ಮಾಣ ಕಾರ್ಯಕ್ಕೆ ಬಳಸಿಕೊಳ್ಳುತ್ತಿದ್ದರು. ಗಂಗರು ತಮ್ಮ ಪೂರ್ವಿಕರಾದ ಶಾತವಾಹನರು ಮತ್ತು ಕದಂಬರ ಶೈಲಿಯಲ್ಲಿಯೇ ಕಟ್ಟಡಗಳ ನಿರ್ಮಾಣದಲ್ಲಿ ಇಟ್ಟಿಗೆಯ ಬಳಕೆಯನ್ನು ಮುಂದುವರೆಸಿದರು. ದೇವಾಲಯದ ಅಧಿಷ್ಠಾನ ನಿರ್ಮಾಣದಲ್ಲಿ ಇಟ್ಟಿಗೆಯ ಬಳಕೆಯನ್ನು ಮಣ್ಣೆಯ ಕಪಿಲೇಶ್ವರ ಮತ್ತು ಸೋಮೇಶ್ವರ ದೇವಾಲಯಗಳಲ್ಲಿ ಕಾಣಬಹುದು.

ಐ.ಕೆ.ಶರ್ಮರವರ *'Temples of the Gangas of Karnataka'* ಪುಸ್ತಕದಲ್ಲಿ ಗಂಗರ ದೇವಾಲಯ ನಿರ್ಮಾಣವನ್ನು ಈ ಕೆಳಕಂಡ ಮೂರು ಹಂತಗಳಾಗಿ ವಿಂಗಡಿಸಿದ್ದಾರೆ.

- ಮೊದಲನೇ ಹಂತ – (ಕ್ರಿ.ಶ.350–650) ಇಟ್ಟಿಗೆ ದೇವಾಲಯಗಳು (ಕೊಂಗಣಿವರ್ಮನಿಂದ ಶ್ರೀವಿಕ್ರಮನವರೆಗೆ)
- ಎರಡನೇ ಹಂತ - (ಕ್ರಿ.ಶ.650–853) ಕಲ್ಲಿನ ದೇವಾಲಯಗಳು (ಭೂವಿಕ್ರಮನಿಂದ ರಾಚಮಲ್ಲ)
- ಮೂರನೇ ಹಂತ – (ಕ್ರಿ.ಶ.853–1004) ನೀತಿಮಾರ್ಗನಿಂದ–ರಕ್ಕಸಗಂಗನವರೆಗೆ

ಗಂಗ ಮಾರಸಿಂಹನ (ಕ್ರಿ.ಶ.796–799) ತಾಮ್ರಶಾಸನಗಳಲ್ಲಿ ಸೋಮೇಶ್ವರ, ಜಿನಾಲಯ, ಮನ್ನಾರಮ್ಮನ ಪ್ರಸ್ತಾಪಗಳಿದ್ದು, 8–9ನೇ ಶತಮಾನದಲ್ಲೇ ಇವು ಪ್ರಾಮುಖ್ಯತೆ ಪಡೆದಿದ್ದವು.[7]

ಕಪಿಲೇಶ್ವರ ಮತ್ತು ಸೋಮೇಶ್ವರ ದೇವಾಲಯಗಳು ಇಟ್ಟಿಗೆಯ ಅಧಿಷ್ಠಾನಗಳಿಂದಾಗಿ ಇವು ಗಂಗರ ದೇವಾಲಯ ನಿರ್ಮಾಣದ ಮೊದಲ ಹಂತದ ನಿರ್ಮಿತಿಗಳು ಎಂದು ಗುರುತಿಸಲಾಗಿದೆ.[8] ಇಟ್ಟಿಗೆಯ ಗಾತ್ರ, ಪ್ರಾಚೀನ ಲಕ್ಷಣಗಳನ್ನು ನೋಡಿದರೆ ಇವು 7ನೇ ಶತಮಾನಕ್ಕೂ ಮೊದಲಿನ ರಚನೆಗಳೆಂದು ಹೇಳಬಹುದು.[9] ಶಿವಮಾರನ ಭೂದಾನಗಳು ಇವನ್ನು ಪುಷ್ಟೀಕರಿಸುತ್ತವೆ. ದೇವಾಲಯದ ನಿರ್ಮಾಣವಾದ ಒಂದು ಶತಮಾನದ ನಂತರ ಶ್ರೀಪುರಷ ಮತ್ತು ಅವನ ಉತ್ತರಾಧಿಕಾರಿಗಳು ಈ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿದರಲ್ಲದೆ ಭೂದಾನವನ್ನೂ ನೀಡಿದ್ದಾರೆ.[10]

### ದೇವಾಲಯದ ವಾಸ್ತು ಲಕ್ಷಣಗಳು

ಮಣ್ಣೆಯ ಚಿಕ್ಕಕೆರೆಯ ಏರಿಯ ಮೇಲಿರುವ ಈ ದೇವಾಲಯ ಶಿಥಿಲಾವಸ್ಥೆಯಲ್ಲಿದೆ. ದೇವಾಲಯ ಪಶ್ಚಿಮಾಭಿಮುಖವಾಗಿದ್ದು, ಗರ್ಭಗುಡಿ, ನಾಲ್ಕು ಕಂಭಗಳ ಮಂಟಪ, ಸೋಪಾನವನ್ನು ಹೊಂದಿದೆ. ಗರ್ಭಗುಡಿಯು ಮಂಟಪಕ್ಕೆ ನೇರವಾಗಿ ತೆರೆದುಕೊಳ್ಳುವಂತಿದ್ದು, ಸೋಪಾನಗಳನ್ನು ಹತ್ತಿ ಬಂದರೆ ನೇರವಾಗಿ ಮಂಟಪವನ್ನು ತಲುಪುತ್ತೇವೆ. ಮಂಟಪದ ಮಧ್ಯೆ ನಂದಿಯ ಮೂರ್ತಿ ಇದ್ದು ಗರ್ಭಗುಡಿಗೆ ಮುಖಮಾಡಿ ಕುಳಿತಿದೆ. ನಂದಿಯು ಶಿಥಿಲವಾಗಿದ್ದು ಮುಖಚರ್ಯೆ ಸ್ಪಷ್ಟವಾಗಿಲ್ಲ. ಮಂಟಪದಲ್ಲಿ ಎರಡು ಜಾಲವಾತಾಯನಗಳಿವೆ. ನನ್ನ ಅಧ್ಯಯನ ವ್ಯಾಪ್ತಿಗೆ ಒಳಪಡುವ ಭೂಪ್ರದೇಶದ ಪುರಾತನ ಅಧಿಷ್ಠಾನ ಇದಾಗಿದೆ. ಈ ದೇವಾಲಯ ಕ್ರಿ.ಶ.600ರ ಆಸುಪಾಸಿನಲ್ಲಿ ನಿರ್ಮಾಣವಾಗಿದೆ.

### ಅಧಿಷ್ಠಾನ

ಈ ದೇವಾಲಯವು ಇಟ್ಟಿಗೆಯ ಅಧಿಷ್ಠಾನವನ್ನು ಹೊಂದಿದ್ದು, ಅಧಿಷ್ಠಾನ ಇನ್ನೂ ಸುಸ್ಥಿತಿಯಲ್ಲಿದೆ. ಇದು ಪಾದಬಂಧ ಮಾದರಿಯ ಅಧಿಷ್ಠಾನ. ಇದು ಉಪಾನ–ಜಗತಿ–ತ್ರಿಪಟ್ಟಕುಮುದ–ಗಳ–ಪಟ್ಟಿಕಾ–ಪ್ರತೀಗಳಿಂದ ಕೂಡಿದೆ. ಜಗತಿಯ ಮೇಲಿನ ತ್ರಿಪಟ್ಟಕುಮುದದ ಮೂರು ಪಟ್ಟಿಗಳೂ ಸ್ಪಷ್ಟವಾಗಿ

[7] ಅಡಿಟಿಪ್ಪಣಿ–2, ಪು.55

[8] ಅಡಿಟಿಪ್ಪಣಿ–7, ಪು.55

[9] ಮೇಲಿನದೇ, ಪು.58

[10] ಮೇಲಿನದೇ, ಪು.58

ಗೋಚರಿಸುವಂತೆ ಇಟ್ಟಿಗೆಯನ್ನು ನಯಗೊಳಿಸಲಾಗಿದೆ. ಪಟ್ಟಿಕಾವು ಮುಂಚಾಚಿಕೊಂಡಿದ್ದು, ಪ್ರತೀಯನ್ನು ಕಲ್ಲಿನಿಂದ ರಚಿಸಲಾಗಿದೆ. ಪ್ರತೀಯು ಅಧಿಷ್ಠಾನದ ಕೊನೆಯ ಭಾಗವಾಗಿದ್ದು ಮೊದಲ ಬಾರಿಗೆ ಪ್ರತೀಗೆ ಕಲ್ಲನ್ನು ಬಳಸಲಾಗಿದೆ. ಕಟ್ಟಡದ ಭಾರ ಹೊರಲು ಅನುಕೂಲವಾಗುವಂತೆ ಪ್ರತೀಯನ್ನು ಕಲ್ಲಿನಿಂದ ರಚಿಸಲಾಗಿದೆ ಹಾಗೂ ಇದು ನಂತರದಲ್ಲಿ ಬೆಳವಣಿಗೆಯಾದ ಕಲ್ಲಿನ ಅಧಿಷ್ಠಾನಗಳ ಅಭಿವೃದ್ಧಿಯ ಮೊದಲ ಘಟ್ಟವೂ ಹೌದು. ಅಧಿಷ್ಠಾನದಲ್ಲಿ ಬಳಕೆಯಾದ ಇಟ್ಟಿಗೆಯು 35x18x9 ಸೆಂ.ಮೀ. ಅಳತೆಯದ್ದಾಗಿದೆ.

**ಭಿತ್ತಿ**

ದೇವಾಲಯದ ಭಿತ್ತಿಯು ಇಂದು ಶಿಥಿಲವಾಗಿ ಬಿದ್ದುಹೋಗಿದೆ. ಭಿತ್ತಿಯಲ್ಲಿ ಭದ್ರಕಸ್ತಂಭಗಳು, ಕೋಷ್ಠಗಳು ಮಾತ್ರ ಉಳಿದುಕೊಂಡಿವೆ. ಭದ್ರಕಸ್ತಂಭವು ಸುಮಾರು ಆರು ಅಡಿಗಳಷ್ಟು ಎತ್ತರವಿದೆ. ದಂಡದ ಕೆಳಭಾಗ ಮತ್ತು ಮೇಲ್ಭಾಗಗಳು ಚೌಕಾಕಾರವಾಗಿದ್ದು ಮಧ್ಯದ ಭಾಗ ಅಷ್ಟಕೋನಾಕಾರದಲ್ಲಿದೆ. ಭದ್ರಕಸ್ತಂಭಕ್ಕೆ ಕುಮುದವಾಗಲಿ, ಮಂಡಿ ಫಲಗೈ ಆಗಲಿ ಇಲ್ಲ. ಭದ್ರಕಸ್ತಂಭ ಮೇಲ್ಭಾಗದ ಚೌಕಾಕಾರವು ನೇರವಾಗಿ ಪೋತಿಕೆಗೆ ಸೇರುತ್ತದೆ. ಇಲ್ಲಿ ವೃತ್ತಪೋತಿಕೆಗಳಿದ್ದು, ನೊಳಂಬರ ಪ್ರಭಾವ ಕಾಣಬಹುದು. ವೃತ್ತಪೊತಿಕೆಯು ನೊಳಂಬರ ಶೈಲಿಯಾಗಿದೆ. ಭದ್ರಕಸ್ತಂಭದ ದಂಡವು ಏಕಶಿಲೆಯಾಗಿದ್ದು ವೃತ್ತಪೊತಿಕೆಯನ್ನು ಬೇರೆ ಕಲ್ಲಿನಲ್ಲಿ ಮಾಡಿ ದಂಡಕ್ಕೆ ಜೋಡಿಸಲಾಗಿದೆ. ವೃತ್ತಿಪೊತಿಕೆಯು ಸರಿಸುಮಾರು ನಾಲ್ಕು ಅಡಿಗಳಷ್ಟು ಅಗಲವಿದೆ. ಇಷ್ಟು ದೊಡ್ಡದಾದ, ಬಲವಾದ ವೃತ್ತಪೋತಿಕೆಗಳು ಪ್ರಸ್ತರದ ಮೇಲ್ಭಾಗದಲ್ಲಿ ಸಾಕಷ್ಟು ಎತ್ತರದ ಹರ ಇದ್ದಿತೆಂಬುದನ್ನು ಸೂಚಿಸುತ್ತದೆ.

**ಜಾಲವಾತಾಯನ (ಜಾಲಾಂಧ್ರ)**

ಭಿತ್ತಿಯ ಮತ್ತೊಂದು ವಾಸ್ತುಶಿಲ್ಪಿಯ ಅಲಂಕಾರವೆಂದರೆ, ಕೋಷ್ಠದಲ್ಲಿನ ಜಾಲವಾತಾಯನಗಳು. ಮಂಟಪದ ಗೋಡೆಯನ್ನು ಮೂರು ಅಡಿಗಳಷ್ಟು ಮುಂಚಾಚಿದಂತೆ ನಿರ್ಮಿಸಿ, ಈ ಮುಂಚಾಚಿದ ಭಿತ್ತಿಯಲ್ಲಿ ಜಾಲವಾತಾಯನಗಳನ್ನು ಮಾಡಲಾಗಿದೆ. ಸಾಮಾನ್ಯವಾಗಿ ಭಿತ್ತಿಯ ಗೋಡೆಯ ಜೊತೆಯಲ್ಲಿಯೇ ಕೋಷ್ಠದ ಅರ್ಧಭಿತ್ತಿಪಾದಗಳನ್ನು ಮಾಡಿಕೊಂಡು ಜಾಲವಾತಾಯನಗಳನ್ನು ಬೇರೆ ಕಲ್ಲಿನಿಂದ ತಯಾರಿಸಿ ನಂತರ ಖಾಲಿ ಬಿಟ್ಟ ಜಾಗದಲ್ಲಿ ಕೂರಿಸಲಾಗುತ್ತದೆ. ಜಾಲವಾತಾಯನಗಳನ್ನು ಭಿತ್ತಿಯ ಕಲ್ಲುಗಳಿಗಿಂತ ಉತ್ತಮ ದರ್ಜೆಯ ಕಲ್ಲುಗಳಿಂದ ತಯಾರಿಸಲಾಗುತ್ತದೆ. ಇಲ್ಲಿಯೂ ಸಹ ಹೀಗೆಯೇ ಬೇರೆ ಕಲ್ಲಿನಿಂದ ಜಾಲವಾತಾಯನಗಳನ್ನು ನಿರ್ಮಿಸಲಾಗಿದೆ. ದಕ್ಷಿಣ ಕರ್ನಾಟಕ ಪ್ರದೇಶಕ್ಕೆ ಕೋಷ್ಠಗಳಲ್ಲಿನ ಅರ್ಧಭಿತ್ತಿಪಾದಗಳು ಚೋಳರ ಕೊಡುಗೆ ಎಂದು ಹೇಳಲಾಗುತ್ತದೆ. ಆದರೆ ಈ ದೇವಾಲಯ ಚೋಳರ ಆಗಮನಕ್ಕಿಂತ 3–4 ಶತಮಾನಗಳ ಮೊದಲೇ ನಿರ್ಮಾಣವಾಗಿದ್ದು ಇಲ್ಲಿಯೂ ಅರ್ಧಭಿತ್ತಿಪಾದಗಳಿವೆ.

ಕೋಷ್ಠದ ಎರಡೂ ಕಡೆಯ ಅರ್ಧಭಿತ್ತಿಪಾದಗಳಲ್ಲಿನ ದಂಡಗಳಲ್ಲಿ ಅಲಂಕಾರವಿಲ್ಲ. ದಂಡಕ್ಕೆ ಪೀಠವೂ ಇಲ್ಲ. ದಂಡದ ಮೇಲ್ಭಾಗದಲ್ಲಿನ ಲಾಸುಮದ ಬಾಹ್ಯರೇಖೆಗಳು ಮೇಲ್ಭಾಗದಲ್ಲಿ ಬಾಗಿದ್ದು ಲಾಸುಮದ ಆಕಾರವೇನೂ ಸ್ಪಷ್ಟವಾಗಿಲ್ಲ. ಲಾಸುಮದ ಮೇಲೆ ವೃತ್ತಕುಮುದದ ಮೇಲೆ ಮಂಡಿ–ಫಲಕಗಳಿವೆ. ಕೋಷ್ಠದ ಮೇಲ್ಭಾಗದಲ್ಲಿ ಶಾಲ ತೋರಣವಿದೆ. ಎಡಭಾಗದ ಜಾಲಾಂಧ್ರವು ಗುಳಿಕ ಜಾಲವಾತಾಯನವಾಗಿದೆ. ವಾತ್ಸಾಯನನ ಕಾಮಸೂತ್ರದಲ್ಲಿ ವಿವರಿಸಲಾಗಿರುವ ಪ್ರೀತಿಯ ಆರು ಹಂತಗಳನ್ನು ಇಲ್ಲಿ ಸಾಂಕೇತಿಕವಾಗಿ ಚಿತ್ರಿಸಲಾಗಿದೆ. ಬಲಭಾಗದ ಜಾಲಾಂಧ್ರದ ಅರ್ಧಕಂಭಗಳು ಎಡಭಾಗದ ಕಂಭಕ್ಕಿಂತ ಅಲಂಕೃತವಾಗಿದ್ದು, ಅಲಂಕಾರ ಅಸ್ಪಷ್ಟವಾಗಿ ಕಾಣುತ್ತವೆ. ದಂಡದ ಮೇಲ್ಭಾಗದಲ್ಲಿ ಉದ್ದನೆಯ ಮಣಿಯ ಹಾರಗಳ

ಅಲಂಕಾರವಿದೆ. ಇದರ ಮೇಲಿನ ಮೂರು ಪಟ್ಟಿಗಳಲ್ಲಿನ ಪುಷ್ಪದಳದ ಅಲಂಕಾರ ಅಸ್ಪಷ್ಟವಾಗಿದೆ. ಇದನ್ನು ಹೊರತುಪಡಿಸಿ ಉಳಿದ ಅಲಂಕಾರ ಎಡಭಾಗದ ಕೋಷ್ಟದಂತೆಯೇ ಇದೆ. ಇದೂ ಸಹ ಗುಳಿಕ ಜಾಲವಾತಾಯವಾಗಿದ್ದು ಮೂರು ಹಂತಗಳಲ್ಲಿ, ವೃತ್ತಕಾರದ ಬಳ್ಳಿಯ ಮೇಲೆ ಕುಳಿತ ಕುಬ್ಜರ ಕೆತ್ತನೆಗಳಿವೆ.

ಭಿತ್ತಿಯು ಇಲ್ಲದಿರುವುದರಿಂದ ಹೊರಭಾಗದಿಂದ ಪ್ರಸ್ತರ ಗುರುತಿಸುವುದು ಕಷ್ಟವಾಗುತ್ತಿದೆ. ಹೀಗಾಗಿ ಒಳಭಾಗದಿಂದ ಪ್ರಸ್ತರದ ಉತ್ತರ, ವಾಜನ, ಆಂತರಿಯ, ಕಪೋತಗಳನ್ನು ಗುರುತಿಸಬಹುದಾಗಿದೆ. ಮೇಲ್ಕಡಗಳನ್ನು ಗುರುತಿಸುವಷ್ಟು ದೇವಾಲಯ ಸುಸ್ಥಿತಿಯಲ್ಲಿಲ್ಲ.

**ಕಂಭಗಳು**

ದೇವಾಲಯದ ಮಂಟಪದಲ್ಲಿ ನಾಲ್ಕು ಕಂಭಗಳಿವೆ. ಮಂಟಪದ ಮಧ್ಯೆ ರಂಗಮಂಟಪವನ್ನು ನಿರ್ಮಿಸಿದಂತೆ ಇರುವ ಸ್ಥಳದ ನೆಲಹಾಸಿಗೆಗೆ ಚಪ್ಪಡಿ ಕಲ್ಲುಗಳನ್ನು ಹಾಕಲಾಗಿದೆ. ಕಂಭಗಳು ಪೂರ್ವಸ್ತ್ರ ಸ್ತಂಭಗಳಾಗಿದ್ದು, ಗಂಗರ ಶೈಲಿಯ ಪೀಠವಿದೆ. ಪೀಠವು ಚೌಕಾಕಾರದಲ್ಲಿದ್ದು, ಮೇಲ್ಭಾಗದ ದಂಡವು ರುದ್ರಕಾಂತವಾಗಿದೆ. ಲಾಸುಮದ ಉದ್ದವು ಕಡಿಮೆಯಾಗಿದ್ದು ಲಾಸುಮದ ಹೊಟ್ಟೆಭಾಗವು ಗೋಳಾಕಾರವಾಗಿದೆ. ಇದರ ಮೇಲೆ ವೃತ್ತಾಕಾರದ ಕುಮುದವಿದ್ದು, ನಾಲ್ಕು ದಿಕ್ಕಿಗೂ ಆಧಾರ ಪೋತಿಕೆ ಇವೆ. ಇಲ್ಲಿ ಮಂಡಿ ಪಲಗೈ ಇಲ್ಲ. ಮಂಡಿ ಪಲಗೈ ಚೋಳರ ಕೊಡುಗೆಯಾಗಿದ್ದು, ಈ ದೇವಾಲಯ ಗಂಗರ ಕಾಲದಾಗಿರುವುದರಿಂದ ಪಲಗೈ ಕಾಣಸಿಗುವುದಿಲ್ಲ. ಕಂಭಗಳು ಕುಳ್ಳಗಿದ್ದು ಆರು ಅಡಿ ಎತ್ತರವಿದೆ. ಲಾಸುಮದ ಕೆಳಭಾಗದ ದಂಡದಲ್ಲಿ ಮಣಿಯ ಹಾರದ ಅಲಂಕಾರವಿದೆ. ಲಾಸುಮದ ಮೇಲ್ಭಾಗದಲ್ಲಿ ಊರ್ಧ್ವದಳ ಮತ್ತು ಅಧೋದಳಗಳ ಅಲಂಕಾರವಿದೆ. ಈ ಅಲಂಕಾರಗಳ ನಡುವೆ ಕಂಪವಿದೆ. ಕುಮುದ ಮತ್ತು ಪೊತಿಕೆಯ ನಡುವೆ ವೀರಕಂಠವಿದೆ. ಅದರ ಮೇಲೆ ಆಧಾರಪೊತಿಕೆ ಇದ್ದು, ಪೊತಿಕೆಯನ್ನು ಬೇರೆ ಕಲ್ಲಿನಿಂದ ಮಾಡಿ ಸೇರಿಸಲಾಗಿದೆ.

**ದ್ವಾರಬಂಧ**

ದೇವಾಲಯದ ಹೊಸ್ತಿಲು ಸರಳವಾಗಿರುತ್ತದೆ. ಆದರೆ ಇಲ್ಲಿ ಹೊಸ್ತಿಲಿನಲ್ಲಿ ಭದ್ರವಿದೆ. ಹೊಸ್ತಿಲಿನಲ್ಲಿ ಎರಡು ಒಳಸರಿದ ಭಾಗ ಮೂರು ಭದ್ರಗಳಿವೆ. ಕೆಳಭಾಗದಲ್ಲಿ ಗಳಪಾದಗಳು ಮತ್ತು ಪದ್ಮನಿಧಿಯ ಅಲಂಕಾರವಿದೆ.

ದ್ವಾರಬಂಧವೂ 9ನೇ ಶತಮಾನದ ನಂತರದ ರಚನೆಯಾಗಿದ್ದು ಗಂಗ–ನೊಳಂಬ–ರಾಷ್ಟ್ರಕೂಟ ಮೂರು ಶೈಲಿಗಳ ಮಿಶ್ರಣವಾಗಿದೆ. ದ್ವಾರಬಂಧವು ತ್ರಿಶಾಖಾ ಮಾದರಿಯಲ್ಲಿದ್ದು ದ್ವಾರಬಂಧದ ಮೇಲೆ ಶಾಲಾ ಶಿಖರವಿದೆ. ಹೊರಭಾಗದ ಮೊದಲ ಶಾಖಾವು ಪುಷ್ಪದಳಗಳಿಂದ ಅಲಂಕೃತವಾಗಿದ್ದು, ಸರ್ವಾಲಂಕೃತವಾದ ಭಿತ್ತಿಪಾದವು ಮಧ್ಯದ ಶಾಖಾವಾಗಿದೆ. ಇದಕ್ಕೆ ಅಧಿಷ್ಠಾನವಿದ್ದು, ಪೀಠವಿಲ್ಲ. ಮೂರನೇ ಶಾಖಾವು ಸರಳವಾಗಿದೆ. ಈ ಶಾಖಾದ ಭಿತ್ತಿಪಾದಕ್ಕೆ ಅಧಿಷ್ಠಾನವಿದೆ. ದಂಡದ ಮೇಲ್ಭಾಗದಲ್ಲಿ ಮಾಲಾ ಅಲಂಕಾರ, ಹಂಸ ಅಲಂಕಾರ ಮತ್ತು ನಾಸಿ ಇದೆ. ನಾಸಿಯ ಮೇಲೆ ವೀರಕಂಠ, ಕುಮುದ, ವೀರಕಂಠ, ಮಂಡಿ ಫಲಗೈ ಇದೆ. ಇದರ ಮೇಲೆ ನಾಲ್ಕು ದಿಕ್ಕಿಗೂ ವೃತ್ತಪೋತಿಕೆ ಇದೆ. ದ್ವಾರಬಂಧಗಳ ಮೇಲೆ ಶಾಲಾ ಶಿಖರವಿದ್ದು, ಉತ್ತರ, ವಾಜನದ ಮೇಲಿನ ಕಪೋತದಲ್ಲಿ ನಾಸಿಗಳಿವೆ. ಇದು ಹೂಬಳ್ಳಿಗಳಿಂದ ಅಲಂಕೃತವಾಗಿದ್ದು, ಗದಾದಲ್ಲಿ ಪದ್ಮವಿದೆ.

**ಆಕರ ಗ್ರಂಥಗಳು**

**ಪ್ರಾಥಮಿಕ ಮೂಲಗಳು**


- *Annual Report of the Mysore Archeological Department, Survey of Mysore*, MAR, 1902-1942, The Government Press.

- B. Lewis Rice. (1905). *Epigraphia Carnatica-IX and Supplementary*, Mysore Government Central Press.
- Suryanath U Kamath. (1989). *Karnataka State Gazetteer*. Government of Karnataka Publication.
- Suryanath U Kamath. (1989). *Bangalore Rural District Gazetteer*. Government of Karnataka.


**ಆನುಷಂಗಿಕ ಆಕರಗಳು**


- ಗೋಪಾಲ್‌ರಾವ್.ಎಚ್.ಎಸ್ (ಪ್ರ.ಸಂ) ಮತ್ತು ದೇವರ ಕೊಂಡಾರೆಡ್ಡಿ (ಸಂಚಿಕೆ ಸಂಪಾದಕರು). (2019). *ಕರ್ನಾಟಕ ಶಿಲ್ಪಕಲಾ ಮಾಲೆ–3, ಗಂಗರ ಶಿಲ್ಪಕಲೆ.* ಕರ್ನಾಟಕ ಶಿಲ್ಪಕಲಾ ಅಕಾಡೆಮಿ,
- ದೇವರ ಕೊಂಡಾರೆಡ್ಡಿ. (1994). *ತಲಕಾಡಿನ ಗಂಗರ ದೇವಾಲಯಗಳು.* ಕನ್ನಡ ಸಾಹಿತ್ಯ ಪರಿಷತ್.
- ನಿರಂಜ ರಾ.ನ. (2011). ಕುಕ್ಕಲನಾಡು ದೇವಾಲಯಗಳು ಮತ್ತು ಶಿಲ್ಪಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಕರ್ನಾಟಕ ಇತಿಹಾಸ ಅಕಾಡೆಮಿ, ಇತಿಹಾಸ ದರ್ಶನ–ಸಂಪುಟ. 16


**ಕ್ಷೇತ್ರಕಾರ್ಯ**

- ಕಪಿಲೇಶ್ವರ ದೇವಾಲಯ ಮತ್ತು ಸೋಮೇಶ್ವರ ದೇವಾಲಯ, ಅಕ್ಕ–ತಂಗಿ ಗುಡಿ ಮತ್ತು ಜಿನಾಲಯ, ಮಣ್ಣೆ, ನೆಲಮಂಗಲ ತಾಲೂಕು. ದಿನಾಂಕ 22–05–2016

**ವಕ್ತೃಗಳ ವಿವರ**

- ವೆಂಕಟೇಶ್ ಸ್ಥಳೀಯರು, ಕಪಿಲೇಶ್ವರ ದೇವಾಲಯ ಮತ್ತು ಸೋಮೇಶ್ವರ ದೇವಾಲಯ, ಅಕ್ಕ–ತಂಗಿ ಗುಡಿ ಮತ್ತು ಜಿನಾಲಯ, ಮಣ್ಣೆ, ದಿನಾಂಕ: 22–05–2016
- ಗೋಪಾಲರಾವ್, ಹೆಚ್.ಎಸ್, ಶಾಸನ ತಜ್ಞರು, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ದಿನಾಂಕ ಮೇ 27–29, 2018